ಅ) ದೇವದಾಸಿಯರ ಪುನರ್ವಸತಿಗಾಗಿ ರೂಪಿಸಲಾಗಿರುವ ಕಾರ್ಯಕ್ರಮಗಳು ;
ಇ) ದೇವದಾಸಿ ಪದ್ಧತಿಯನ್ನು ತಡೆಗಟ್ಟಲು ಈ ಸರ್ಕಾರವು ತೆಗೆದುಕೊಂಡಿರುವ ಸೂಕ್ತ ಕಾರ್ಯಕ್ರಮಗಳು?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು) –

ಅ) 21,856

ಜಿಲ್ಲೆಗಳ ವಿವರ :

1)	ಬಿಜಾಪುರ	4,895
2)	ಧಾರವಾಡ	2,503
3)	ಬಳ್ಳಾರಿ	1,635
4)	ರಾಯಚೂರು	7,374
5)	ಬೆಳಗಾಂ	3,737
6)	ಗುಲ್ಬರ್ಗ	690
7)	ಕೋಲಾರ	77
8)	ಚಿತ್ರದುರ್ಗ	915
9)	ಬೀದರ್	30

ಆ) ದೇವದಾಸಿಯರ ಪುನರ್ ವಸತಿಗಾಗಿ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ : ವರ್ಗಗಳ ಅಭಿವೃದ್ಧಿ ನಿಗಮವು ವಿವಿಧ ಶಾಖೆಗಳಲ್ಲಿ ತರಬೇತಿ ಕಾರ್ಯಕ್ರಮಗಳನ್ನು ಕೈಗೊಂಡಿರುವುದಲ್ಲದೆ, ದೇವದಾಸಿಯರ ವಿವಾಹ, ಜನ ಜಾಗೃತಿ ಉಂಟು ಮಾಡಲು ಜಾಗೃತಾ ಶಿಬಿರ, ಕೈ ಮಗ್ಗ ನೇಯ್ಗೆ ತರಬೇತಿ ಮತ್ತು ಉತ್ಪಾದನಾ ಕೇಂದ್ರ ದೇವದಾಸಿಯರ ಮಕ್ಕಳಿಗೆ ಶೈಕ್ಷಣಿಕ ಕಾರ್ಯಕ್ರಮ ಮತ್ತು ಆರೋಗ್ಯ ಶಿಬಿರ ಇತ್ಯಾದಿಗಳನ್ನು ಏರ್ಪಡಿಸಲಾಗಿದೆ.

ಇ) 1) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಒಂದು ವಿಶೇಷ ಘಟಕ ಮತ್ತು ರಾಯಚೂರು ಹಾಗೂ ಬೆಳಗಾಂಗಳಲ್ಲಿ 2 ಚಿಕ್ಕ ಘಟಕಗಳನ್ನು ಸ್ಥಾಪಿಸಲಾಗಿದೆ.

2) ಕರ್ನಾಟಕ ರಾಜ್ಯ ದೇವದಾಸಿ (ಸಮರ್ಪಣ ನಿಷೇಧ) ಕಾನೂನು 82ರಲ್ಲಿ ರಚಿಸಲಾಗಿದೆ.

3) ಸೌಂದತ್ತಿಯಲ್ಲಿ ಒಂದು ಬಾಲ ಮಂದಿರವನ್ನು ಅಥಣಿಯಲ್ಲಿ ಒಂದು ರಾಜ್ಯ ನಿಲಯವನ್ನು ಸ್ಥಾಪಿಸಿ ದೇವದಾಸಿಯರಿಗೆ ಶಿಕ್ಷಣ, ವೃತ್ತಿ ತರಬೇತಿ ಮತ್ತು ಪುನರ್ ವಸತಿ ಇತ್ಯಾದಿಗಳನ್ನು ಒದಗಿಸಲಾಗುತ್ತಿದೆ.

4) ದೇವದಾಸಿಯರನ್ನು ಮದುವೆಯಾಗುವವರಿಗೆ ರೂ.3,000–00 ಗಳ ಸಹಾಯಧನ.

5) ಇವುಗಳಲ್ಲದೆ ಇನ್ನೂ ಅನೇಕ ಕಾರ್ಯಕ್ರಮಗಳನ್ನು ಕರ್ನಾಟಕ ರಾಜ್ಯ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ : ವರ್ಗಗಳ ಅಭಿವೃದ್ಧಿ ನಿಗಮಗಳು ಹಾಕಿಕೊಂಡಿರುತ್ತವೆ.

ಹೊಸ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಪ್ರಾರಂಭಿಸುವುದು.

765. ಶ್ರೀ ಬಸವರಾಜರಾಯರೆಡ್ಡಿ (ಯಲ್ಬುರ್ಗ) :– ಮಾನ್ಯ ಕಾರ್ಮಿಕ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

1. ಪ್ರಸ್ತುತ ಸಾಲಿನಲ್ಲಿ ಸರ್ಕಾರವು ಯಾವುದಾದರೂ ಹೊಸ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಪ್ರಾರಂಭಿಸಿದೆಯೇ?

LA-Vol-III 4

2. ಹಾಗಿದ್ದಲ್ಲಿ ಎಲ್ಲಿ ಮತ್ತು ಯಾರ ನೆರವಿನಿಂದ ;
3. ಸರ್ಕಾರವು ಪ್ರಾರಂಭಿಸಲು ಉದ್ದೇಶಿಸಿರುವ ಹೊಸ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಮುಂದಿನ ವಿದ್ಯಾಭ್ಯಾಸದ ವರ್ಷದಲ್ಲಿ ಪ್ರಾರಂಭಿಸುವುದೇ ?

ಶ್ರೀ ಎ.ಎಸ್. ನಾಡಗೌಡ (ಕಾರ್ಮಿಕ ಸಚಿವರು) –

1. ಹೌದು
2. ಮೂರು ಮಹಿಳಾ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಗುಂಡ್ಲುಪೇಟೆ, ನಲವತ್‌ವಾಡ್ ಮತ್ತು ಗದಗ್‌ನಲ್ಲಿ ವಿಶ್ವಬ್ಯಾಂಕ್ ಯೋಜನೆಯಡಿ ಕೇಂದ್ರದ ನೆರವಿನೊಂದಿಗೆ ಪ್ರಾರಂಭಿಸಲಾಗಿದೆ.
3. ಮುಂದಿನ ಅಂದರೆ 1992–93ನೇ ಸಾಲಿನಲ್ಲಿ ವಿಶ್ವಬ್ಯಾಂಕ್ ಯೋಜನೆಯಡಿ ಈ ಕೆಳಕಂಡ ನಾಲ್ಕು ಸ್ಥಳಗಳಲ್ಲಿ ಮಹಿಳಾ ಕೈಗಾರಿಕಾ ತರಬೇತಿ ಸಂಸ್ಥೆಗಳನ್ನು ಪ್ರಾರಂಭಿಸಲು ಸರ್ಕಾರವು ಉದ್ದೇಶಿಸಿದೆ.

    1. ತಿಪಟೂರು
    2. ಕೋಲಾರ
    3. ಪುತ್ತೂರು
    4. ಬೆಂಗಳೂರು ನಗರ.

ಶ್ರೀ ಓ. ಚಿನ್ನಪ್ಪರೆಡ್ಡಿ ಆಯೋಗದ ವರದಿ ಜಾರಿ.

764. ಶ್ರೀ ಬಸವರಾಜರಾಯರೆಡ್ಡಿ (ಯಲ್ಬುರ್ಗ) :– ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ನ್ಯಾಯಮೂರ್ತಿ ಶ್ರೀ ಓ. ಚಿನ್ನಪ್ಪರೆಡ್ಡಿರವರ ಆಯೋಗದ ವರದಿಯನ್ನು ಸರ್ಕಾರ ಅಂಗೀಕರಿಸಿದೆಯೇ;
ಆ) ಹಾಗಿದ್ದಲ್ಲಿ, ಈ ಆಯೋಗದ ಶಿಫಾರಸ್ಸುಗಳನ್ನು ಯಾವಾಗ ಜಾರಿಗೊಳಿಸಲಾಗುವುದು;
ಇ) ಈ ವರದಿಯನ್ನು ಅಂಗೀಕರಿಸದಿದ್ದಲ್ಲಿ ಸರ್ಕಾರವು ಯಾವ ಕ್ರಮಗಳನ್ನು ತೆಗೆದುಕೊಳ್ಳಲು ಯೋಜಿಸಿದೆ ?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು) –

ಅ) ನ್ಯಾಯಮೂರ್ತಿ ಶ್ರೀ ಓ. ಚಿನ್ನಪ್ಪರೆಡ್ಡಿ ಆಯೋಗದ ವರದಿಯು ಇನ್ನೂ ಸಚಿವಸಂಪುಟ ಉಪ ಸಮಿತಿಯ ಪರಿಶೀಲನೆಯಲ್ಲಿದೆ.
ಆ) ಪ್ರಶ್ನೆ (ಅ) ದ ಉತ್ತರದಿಂದ ಇದು ಉದ್ಭವಿಸುವುದಿಲ್ಲ.
ಇ) ಪ್ರಶ್ನೆ (ಅ) ದ ಉತ್ತರದಿಂದ ಇದು ಉದ್ಭವಿಸುವುದಿಲ್ಲ.